7.3.22 101

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಸುನೀಲ್ ವಲ್ಯಾಪುರ್ ರವರ ನಿಯಮ-72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:**

ಕರ್ನಾಟಕ ಭೋವಿ ವಡ್ಡರ ನಿಗಮವು ಸ್ಥಾಪನೆಯಾಗಿದ್ದು, ಈ ನಿಗಮಕ್ಕೆ ಯಾವ ಯಾವ ವರ್ಷದಲ್ಲಿ ಎಷ್ಟು ಎಷ್ಟು ಅನುದಾನ ಸರ್ಕಾರ ಒದಗಿಸಿರುವುದು. ಪ್ರತಿ ವರ್ಷವಾರು ಎಷ್ಟು ಒದಗಿಸಿರುವುದು. ಹಾಗಿದ್ದಲ್ಲಿ, ಈ ನಿಗಮದಿಂದ ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡಿರುವುದು, ವಿವರ ನೀಡುವುದು. ಹಾಗೂ ಖರ್ಚಾಗಿರುವ ಮೊತ್ತ ಎಷ್ಟು, ಪ್ರತಿ ವರ್ಷಾವಾರು ವಿವರ ನೀಡುವುದು. ಹಾಗೂ ಈ ನಿಗಮಕ್ಕೆ ಎಷ್ಟು ಜನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪಕರು ಹಾಗೂ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು, ಯಾವ ಯಾವ ವರ್ಷದಲ್ಲಿ ನೇಮಿಸಿದ್ದೀರಿ, ಹಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು. 2022ರಲ್ಲಿ ಒದಗಿಸಿರುವ ಅನುದಾನದಲ್ಲಿ ಖರ್ಚು ಆಗದೇ ಇರುವ ಮೊತ್ತ ಎಷ್ಟು ಕಾರಣ ನೀಡುವುದು, 2018 ರಿಂದ 2022 ರವರೆಗೆ ಸರ್ಕಾರದಿಂದ ನಿಗಮಕ್ಕೆ ಒದಗಿಸಿರುವ ಅನುದಾನ ಎಷ್ಟು. ಹಾಗೂ ಯೋಜನೆಗಳಿಗೆ ಖರ್ಚಾಗಿರುವ ಜಿಲ್ಲಾವಾರು ಮೊತ್ತ ಎಷ್ಟು ವಿವರ ನೀಡುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತರಬಯಸಿರುತ್ತಾರೆ.

ಉತ್ತರ:-

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯದಲ್ಲಿರುವ ಭೋವಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅವರುಗಳು ಅನುಭವಿಸುತ್ತಿರುವ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಗೌರವಯುತವಾದ ಹಾಗೂ ನೆಮ್ಮದಿಯ ಜೀವನವನ್ನು ಸಾಗಿಸಲು ಅನುಕೂಲವಾಗುವ ದೃಷ್ಟಿಯಿಂದ ಕಂಪನಿ ಕಾಯ್ದೆ 2013ರ ಕಲಂ 08ರ ಅಡಿಯಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವನ್ನು ಸರ್ಕಾರದ ಆದೇಶ ಸಂಖ್ಯೆ:-ಸಕಇ 40 ಎಸ್ಎಲ್‌ಪಿ 2011 ದಿನಾಂಕ: 29.02.2016 ರಂದು ಸ್ಥಾಪಿಸಲಾಗಿದೆ. ದಿನಾಂಕ:08-10-2017 ರಂದು ಲೋಕಾರ್ಪಣೆ ಮಾಡಲಾಗಿದೆ. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷ ವಿವಿಧ ಅಭಿವೃದ್ಧಿ ಯೋಜನೆಯಡಿ (SCSP) ಅನುದಾನವನ್ನು ನಿಗದಿಪಡಿಸುತ್ತದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

1) **ಸ್ವಯಂ ಉದ್ಯೋಗ ನೇರಸಾಲ ಯೋಜನೆ:**-ಈ ಯೋಜನೆಯಡಿ ಪರಿಶಿಷ್ಟ ಜಾತಿಯ ನಿರುದ್ಯೋಗಿಗಳು ಕೈಗಾಡಿಗಳನ್ನು ಖರೀದಿಸಿ ಹಾಗೂ ರೈತರಿಂದ ತರಕಾರಿ, ಹಣ್ಣುಗಳನ್ನು ಖರೀದಿ ಮಾಡಿ ತಳ್ಳುವ ಗಾಡಿ ಮೂಲಕ ಮಾರಾಟ ಮಾಡಿ ಸ್ವಯಂ ಉದ್ಯೋಗ ಕೈಗೊಂಡು ಆದಾಯಗಳಿಸಲು ಘಟಕ ವೆಚ್ಚದ ಪೈಕಿ ರೂ.0.50 ಲಕ್ಷಗಳಲ್ಲಿ ಸಾಲಸೌಲಭ್ಯ ಕಲ್ಪಿಸಲಾಗುವುದು. ಘಟಕ ವೆಚ್ಚದ ಪೈಕಿ ರೂ. 25,000/- ಸಹಾಯಧನ ಹಾಗೂ ರೂ.25,000/- ಸಾಲದ ಮೊತ್ತವಾಗಿರುತ್ತದೆ.

2) **ಉದ್ಯಮಶೀಲತಾ ಯೋಜನೆ (ಬ್ಯಾಂಕುಗಳ ಸಹಯೋಗದಲ್ಲಿ):-** ಪರಿಶಿಷ್ಟ ಜಾತಿಯ ಭೋವಿ ಜನಾಂಗದ ನಿರುದ್ಯೋಗಿ ಯುವಕ/ಯುವತಿಯರು ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ

ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ನಿಗಮದ ಸಹಾಯಧನವನ್ನು ಹೊರತು ಪಡಿಸಿ ಘಟಕ ವೆಚ್ಚದ ಉಳಿದ ಭಾಗವನ್ನು ಬ್ಯಾಂಕ್ ಸಾಲದಿಂದ ಭರಿಸಲಾಗುವುದು. ಘಟಕ ವೆಚ್ಚ ರೂ:3.50 ಲಕ್ಷ ಮತ್ತು ರೂ:5:00 ಲಕ್ಷ.

3) **ಮೈಕ್ರೊ ಕ್ರೆಡಿಟ್ ಯೋಜನೆ:-** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ "ಮೈಕ್ರೋ ಕ್ರೆಡಿಟ್ ಯೋಜನೆ" ಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿಯ ಭೋವಿ ಜನಾಂಗದ ನಿರುದ್ಯೋಗಿ ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಲಾಭಗಳಿಸಲು ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದಿಂದ ಸಹಾಯದನ ಮತ್ತು ಸಾಲ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ. ಆಯ್ಕೆಯಾದ ಕನಿಷ್ಟ 10 ಮಹಿಳೆಯರ ಸ್ವಸಹಾಯ ಗುಂಪನ್ನು ರಚಿಸುವುದು/ಹಾಲಿ ಅಸ್ಥಿತ್ವದಲ್ಲಿರುವ ಮಹಿಳಾ ಸ್ವಸಹಾಯ ಗುಂಪಿಗೆ ಆರ್ಥಿಕ ಬೆಂಬಲವನ್ನು ನೀಡಲಾಗುವುದು. ಜಂಟಿ ಖಾತೆಯನ್ನು ಆರಂಭಿಸಿ ಉತ್ತಮ ಆದಾಯ ಗಳಿಸುವ, ಉತ್ಪಾದನಾ/ಸೇವಾಘಟಕ ಆರಂಭಿಸಲು ರೂ.2.50ಲಕ್ಷ ಸಾಲ ಮತ್ತು ಸಹಾಯಧನವನ್ನು ಮಂಜೂರು ಮಾಡಲಾಗುವುದು. ಪ್ರತಿ ಸದಸ್ಯರಿಗೆ ರೂ.25,000/-ದಂತೆ ಹಣವನ್ನು ನಿಗಮ ಭರಿಸುತ್ತದೆ. (ರೂ.15,000/- ಸಹಾಯಧನ ಮತ್ತು ರೂ.10,000/- ಬೀಜಧನ ಸಾಲ). ವ್ಯಾಪಾರ/ ಉತ್ಪಾದನೆ/ಸೇವಾ ಚಟುವಟಿಕೆಗಳಲ್ಲಿ ಗಳಿಸುವ ಆದಾಯವನ್ನು ಸಮಾನವಾಗಿ ಹಂಚಿಕೆ ಮಾಡಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದುವುದು ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.

4) **ಗಂಗಾಕಲ್ಯಾಣ ಯೋಜನೆ:-** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಭೋವಿ ಜನಾಂಗದ ಸಣ್ಣ ಮತ್ತು ಅತಿ ಸಣ್ಣ ರೈತರ ಖುಷ್ಕಿ ಜಮೀನಿಗೆ ಕೆಳಕಂಡ ಕಾರ್ಯಕ್ರಮಗಳ ಮುಖೇನ ನೀರಾವರಿ ಸೌಲಭ್ಯ ಒದಗಿಸಲಾಗುವುದು.

**ಅ) ವೈಯುಕ್ತಿಕ ನೀರಾವರಿ, ಕೊಳವೆಬಾವಿ ಯೋಜನೆ:-** ಈ ಕಾರ್ಯಕ್ರಮದಡಿ 1.20 ಎಕರೆಯಿಂದ 5 ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಭೋವಿ ಜನಾಂಗದ ರೈತರ ಖುಷ್ಕೀ ಜಮೀನಿನಲ್ಲಿ ಕೊಳವೆಬಾವಿ/ತೆರೆದ ಬಾವಿ ಕೊರೆದು, ಪಂಪ್‌ಸೆಟ್ & ಇತರೆ ಸಲಕರಣೆಗಳನ್ನು ಸರಬರಾಜು ಮಾಡಿ ಕೊಳವೆಬಾವಿಗೆ ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದು ಈ ಯೋಜನೆಯ ಅನುಷ್ಠಾನದ ಮುಖ್ಯ ಉದ್ದೇಶವಾಗಿರುತ್ತದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಕನಿಷ್ಠ ಮಿತಿ 1.00 ಎಕರೆ ಇರುತ್ತದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಗೂ ತುಮಕೂರು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಂತೆ ಘಟಕವೆಚ್ಚ ರೂ.4.50 ಲಕ್ಷವಿದ್ದು, ಇದರಲ್ಲಿ ರೂ.3.50ಲಕ್ಷ ಸಹಾಯಧನ ರೂ.0.50 ಲಕ್ಷ ವಿದ್ಯುದ್ಧೀಕರಣಕ್ಕೆ ಹಾಗೂ ರೂ.0.50 ಲಕ್ಷ ಅವಧಿ ಸಾಲವಾಗಿರುತ್ತದೆ. ಉಳಿದ ಜಿಲ್ಲೆಗಳಿಗೆ ರೂ.3.50 ಲಕ್ಷ ಘಟಕ ವೆಚ್ಚ ನಿಗಧಿ ಪಡಿಸಲಾಗಿದ್ದು, ರೂ.2.50 ಲಕ್ಷ ಸಹಾಯಧನ ಹಾಗೂ ರೂ.0.50 ಲಕ್ಷ ವಿದ್ಯುದ್ಧೀಕರಣ ಹಾಗೂ ರೂ.0.50 ಲಕ್ಷ ಅವಧಿಸಾಲ ಇರುತ್ತದೆ.

5) **ಭೂ ಒಡೆತನ ಯೋಜನೆ :-** ಭೂ ಒಡೆತನ ಯೋಜನೆಯಡಿ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಕನಿಷ್ಟ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ ಅಥವಾ ಕನಿಷ್ಟ 1/2 ಎಕರೆ (20 ಗುಂಟೆ) ಭಾಗಾಯ್ತು ಜಮೀನನ್ನು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿರದ ಇತರೆ ಜನಾಂಗದವರ ಜಮೀನನ್ನು ಖರೀದಿಸಿ ನೇರವಾಗಿ ಪರಿಶಿಷ್ಟ ಜಾತಿ ಭೋವಿ ಜನಾಂಗದ ಮಹಿಳೆಯರ ಹೆಸರಿನಲ್ಲಿ ನೋಂದಣಿ ಮಾಡಿಕೊಡಲಾಗುವುದು. ಜಮೀನಿನ ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಅಥವಾ ಜಿಲ್ಲೆ ಯೋಜನಾ ಅನುಷ್ಠಾನ ಸಮಿತಿಯ ದರ ನಿಷ್ಕರ್ಶೆಯಂತೆ ಘಟಕ ವೆಚ್ಚ ಗರಿಷ್ಠ ರೂ.15.00 ಲಕ್ಷಗಳ ವೆಚ್ಚದಲ್ಲಿ. ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಘಟಕ ವೆಚ್ಚ ರೂ.20.00ಲಕ್ಷಗಳಲ್ಲಿ ಶೇ.50ರಷ್ಟು ಸಹಾಯಧನ ಹಾಗೂ ಶೇ.50 ರಷ್ಟು ಸಾಲವಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

4) **ಐರಾವತ ಯೋಜನೆ :-** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಈ ಯೋಜನೆಗೆ ಘಟಕ ವೆಚ್ಚದ ಶೇ:50ರಷ್ಟು / ಗರಿಷ್ಟ ರೂ.5.00 ಲಕ್ಷಗಳವರೆಗೆ ನಿಗಮದಿಂದ ಸಹಾಯಧನ ಒದಗಿಸಲಾಗುವುದು. ಉಳಿದ ಶೇ:50ರಷ್ಟು ಭಾಗ ಬ್ಯಾಂಕ್/ಹಣಕಾಸು ಸಂಸ್ಥೆ/ಫಲಾನುಭವಿಯ ವಂತಿಕೆಯಿಂದ ಭರಿಸಿ ಯೋಜನೆಯನ್ನು ಅನುಷ್ಟಾನ ಮಾಡಲಾಗುವುದು. ಕಡ್ಡಾಯವಾಗಿ "ಓಲಾ"/"ಉಬರ್" ಸಂಸ್ಥೆಗಳೊಂದಿಗೆ ಟೈ-ಅಪ್ ಮಾಡಿಕೊಂಡು ಬೇಡಿಕೆ ಇರುವ ಮುಖ್ಯ ನಗರ ಪ್ರದೇಶಗಳಾದ ರಾಜಧಾನಿ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಇನ್ನಿತರೇ ಜಿಲ್ಲಾ ಕೇಂದ್ರಗಳಲ್ಲಿ ಯೋಜನೆಯನ್ನು ರೂಪಿಸಲಾಗಿದೆ.

**5) ಸಮೃದ್ಧಿ ಯೋಜನೆ:-** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಅರ್ಹ ಪರಿಶಿಷ್ಟ ಜಾತಿ/ಭೋವಿ ಜನಾಂಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಗರಿಷ್ಟ ರೂ.10.00ಲಕ್ಷಗಳ ವೆಚ್ಚದಲ್ಲಿ ಸದರಿ ಯೋಜನೆಯನ್ನು ಅನುಷ್ಟಾನಗೊಳ ಸಲಾಗುವುದು. ಸದರಿ ಯೋಜನೆಯಲ್ಲಿ ಘಟಕ ವೆಚ್ಚದ ಶೇ:50ರಷ್ಟು ಗರಿಷ್ಟ ರೂ.5.00ಲಕ್ಷ ಸಹಾಯಧನ ಮತ್ತು ಉಳಿದ ಶೇ:50ರಷ್ಟು ವೆಚ್ಚವನ್ನು ನಿಗಮದಿಂದ ಬೀಜಧನವನ್ನಾಗಿ ನೀಡಲಾಗುವುದು. ಪ್ರತಿ ಫಲಾನುಭವಿಗೆ ಘಟಕ ವೆಚ್ಚಕ್ಕೆ ಗರಿಷ್ಟ ಶೇ:50ರಷ್ಟು ಸಹಾಯಧನ ಉಳಿದ ಶೇ:50ರಷ್ಟು ನಿಗಮದಿಂದ ಬೀಜಧನ ಸಾಲ ಒದಗಿಸಲಾಗುವುದು ಸದರಿ ಯೋಜನೆಗಳ ನ್ನು ಸರ್ಕಾರಿ ಹಾಗೂ ಬ್ರಾಂಡೆಡ್ ಸಂಸ್ಥೆಗಳ ಸಹಯೋಗದಲ್ಲಿ ತರಬೇತಿ ಹಾಗೂ ಯೋಜನೆಯ ಅನುಷ್ಟಾನವನ್ನು ಮಾಡಲಾಗುವುದು.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ ಈ ಕೆಳಕಂಡ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.**

| ಕ್ರ.ಸಂ | ಅಧಿಕಾರಿ/ಸಿಬ್ಬಂಧಿಯ ಹೆಸರು | ಪದನಾಮ | ಕಾರ್ಯನಿರ್ವಹಣೆ ಅವಧಿ | ನಿಯೋಜನೆಗೊಂಡ ಇಲಾಖೆ/ನಿಗಮ/ಮಂಡಳಿ |
|---|---|---|---|---|
| 1 | ಶ್ರೀ ಶ್ರೀನಿವಾಸಲು ಐ.ಎಫ್.ಎಸ್ | ವ್ಯವಸ್ಥಾಪಕ ನಿರ್ದೇಶಕರು | 01-04-2018 ರಿಂದ 23-02-2019 ರವರೆಗೆ | ಕರ್ನಾಟಕ ಅರಣ್ಯ ಇಲಾಖೆ |
| 2 | ಶ್ರೀ ರಾಘವೇಂದ್ರ | ವ್ಯವಸ್ಥಾಪಕ | 23-02-2019 ರಿಂದ | ಕಂದಾಯ ಇಲಾಖೆ |

| | | | | |
|---|---|---|---|---|
| | ಕೆ.ಎ.ಎಸ್ | ನಿರ್ದೇಶಕರು | 30-08-2019 ರವರೆಗೆ | |
| 3 | ಶ್ರೀ ಕೆ.ಎಂ.ಪ್ರಸಾದ್ | ವ್ಯವಸ್ಥಾಪಕ ನಿರ್ದೇಶಕರು | 01-09-2019 ರಿಂದ 17-11-2019 ರವರೆಗೆ | ಸಮಾಜ ಕಲ್ಯಾಣ ಇಲಾಖೆ |
| 4 | ಶ್ರೀಮತಿ ಅರ್ಚನಾ.ವೈ | ವ್ಯವಸ್ಥಾಪಕ ನಿರ್ದೇಶಕರು | 18-11-2019 ರಿಂದ 07-01-2020 ರವರೆಗೆ | ಸಮಾಜ ಕಲ್ಯಾಣ ಇಲಾಖೆ |
| 5 | ಶ್ರೀ ಜಿ.ಜೆ ಪದ್ಮನಾಭ | ಪ್ರಧಾನ ವ್ಯವಸ್ಥಾಪಕರು | 01-04-2018 ರಿಂದ 10-06-2018 ರವರೆಗೆ | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 6 | ಶ್ರೀ ಶಿವಸ್ವಾಮಿ ಸಿ.ಪಿ | ಪ್ರಧಾನ ವ್ಯವಸ್ಥಾಪಕರು | 11-06-2018 ರಿಂದ 16-07-2019 ರವರೆಗೆ | ಕೆ.ಎಂ.ಎಫ್ |
| 7 | ಶ್ರೀಮತಿ ಮಾಯಾದೇವಿ ಗಲಗಲಿ | ಪ್ರಧಾನ ವ್ಯವಸ್ಥಾಪಕರು ಹೆಚ್ಚುವರಿ ವ್ಯವಸ್ಥಾಪಕ ನಿರ್ದೇಶಕರು | 16-07-2019 ರಿಂದ 01-02-2021 | ಸಮಾಜ ಕಲ್ಯಾಣ ಇಲಾಖೆ |
| 8 | ಶ್ರೀ ಕೃಷ್ಣರಾಜ್ ಕೆ. | ಲೆಕ್ಕಾಧಿಕಾರಿಗಳು | 01-04-2018 ರಿಂದ 30-08-2019 ರವರೆಗೆ | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 9 | ಶ್ರೀಮತಿ ಲತಾ | ಕಛೇರಿ ಅಧೀಕ್ಷಕರು | 01-04-2018 ರಿಂದ 31-12-2019 ರವರೆಗೆ | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 10 | ಶ್ರೀ ದಶರಥ ಜಿ | ಪ್ರಥಮ ದರ್ಜೆ ಸಹಾಯಕರು | 10-08-2018 ರಿಂದ 26-06-2020 ರವರೆಗೆ | ಎಂ.ಎಂ.ಎಲ್ |
| 11 | ಶ್ರೀ ಹೆಚ್.ವಿ ಶ್ರೀನಿವಾಸ | ಪ್ರಥಮ ದರ್ಜೆ | 03-10-2019 ರಿಂದ | ಸಮಾಜ ಕಲ್ಯಾಣ |

| | | ಸಹಾಯಕರು | | ಇಲಾಖೆ |
|---|---|---|---|---|
| 12 | ಶ್ರೀಮತಿ ಕಾಮಾಕ್ಷಿ | ಜಿಲ್ಲಾ ವ್ಯವಸ್ಥಾಪಕರು ಬೆಂಗಳೂರು ಗ್ರಾಮಾಂತರ ಜಿಲ್ಲೆ | 01-04-2018 ರಿಂದ ರವರೆಗೆ ಕಾರ್ಯನಿರ್ವಹಿಸಿ 15-12-2020 ರಂದು ನಿಧನ ಹೊಂದಿರುತ್ತಾರೆ. | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 13 | ಶ್ರೀ ಚಿನ್ನಪ್ಪ | ತಾಲ್ಲೂಕು ಅಭಿವೃದ್ಧಿ ಅಧಿಕಾರಿ (ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ಕ್ಷೇತ್ರ) | 01-04-2018 ರಿಂದ 31-3-2019 ರವರೆಗೆ | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 14 | ಶ್ರೀ ನರಸಿಂಹಮೂರ್ತಿ | ತಾಲ್ಲೂಕು ಅಭಿವೃದ್ಧಿ ಅಧಿಕಾರಿ (ಹೊಸಕೋಟೆ ವಿ.ಕ್ಷೇತ್ರ) | 01-04-2018 ರಿಂದ 31-3-2019 ರವರೆಗೆ | ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 15 | ಶ್ರೀ ಹರಿಪ್ರಸಾದ್ | ಪ್ರಥಮ ದರ್ಜೆ ಸಹಾಯಕರು | 10-09-2018 ರಿಂದ ಇಲ್ಲಿಯವರೆಗೆ | ಸಮಾಜ ಕಲ್ಯಾಣ ಇಲಾಖೆ |
| 16 | ಶ್ರೀ ಪ್ರಕಾಶ್ | ಲೆಕ್ಕಾಧಿಕಾರಿಗಳು | 17-11-2020 ರಿಂದ 24-06-2021 ರವರೆಗೆ | ಲೆಕ್ಕ ಪತ್ರ ಇಲಾಖೆ |
| 17 | ಶ್ರೀ ಗೋವಿಂದರಾಜು | ಕಛೇರಿ ಅಧೀಕ್ಷಕರು | 17-11-2020 ರಿಂದ 05-04-2022 ರವರೆಗೆ | ಸಮಾಜ ಕಲ್ಯಾಣ ಇಲಾಖೆ |
| 17 | ಶ್ರೀಮತಿ ಆರ್.ಲೀಲಾವತಿ | ವ್ಯವಸ್ಥಾಪಕ ನಿರ್ದೇಶಕರು | 01-02-2021 ರಿಂದ ಇಲ್ಲಿಯವರೆಗೆ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ |
| 18 | ಡಾ॥ ಬಿ.ಕೆ ನಾಗರಾಜಪ್ಪ | ಪ್ರಧಾನ ವ್ಯವಸ್ಥಾಪಕರು | 05-04-2021 ರಿಂದ ಇಲ್ಲಿಯವರೆಗೆ | ಸಮಾಜ ಕಲ್ಯಾಣ ಇಲಾಖೆ |
| 19 | ಶ್ರೀ ಪಿ.ಡಿ ಸುಬ್ಬಪ್ಪ | ಕಛೇರಿ ಅಧೀಕ್ಷಕರು | 05-04-2021 ರಿಂದ ಇಲ್ಲಿಯವರೆಗೆ | ಮೈಸೂರು ಕಾಗದ ಕಾರ್ಖಾನೆ |

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ 2021-22 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನಾವಾರು ವಿವರ.

1. <u>ಸ್ವಯಂ ಉದ್ಯೋಗ ಯೋಜನೆ:-</u> ಪರಿಶಿಷ್ಟ ಜಾತಿಯ ಭೋವಿ ಜನಾಂಗದವರಿಗೆ ತರಕಾರಿ, ಹಣ್ಣು-ಹಂಪಲು, ಮೀನು ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ/ ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಗರಿಷ್ಟ ಘಟಕ ವೆಚ್ಚ ರೂ.50,000/- ದಲ್ಲಿ ಶೇ.50 ರಷ್ಟು ನಿಗಮದಿಂದ ನೇರಸಾಲ ಮತ್ತು ಶೇ.50 ರಷ್ಟು ಸಹಾಯಧನವಾಗಿರುತ್ತದೆ.

2. <u>ಉದ್ಯಮ ಶೀಲತಾ ಯೋಜನೆ:-</u> ಪರಿಶಿಷ್ಟ ಜಾತಿಯ ಭೋವಿ ಜನಾಂಗದ ನಿರುದ್ಯೋಗಿ ಯುವಕ ಯುವತಿಯರಿಗೆ ಅವರುಗಳು ಇಚ್ಛಿಸುವ ವಿವಿಧ ಚಟುವಟಿಕೆಗಳಲ್ಲಿ ಸ್ವಯಂ ಉದ್ಯೋಗ ಪ್ರಾರಂಭಿಸಲು ಉದ್ಯಮಶೀಲತಾ ಅಭಿವೃದ್ಧಿಗಾಗಿ ಅಥವಾ ವಾಹನ ಸೌಲಭ್ಯಕ್ಕಾಗಿ ಬ್ಯಾಂಕುಗಳ ಸಹಯೋಗದೊಂದಿಗೆ ಶೇ.50 ರಷ್ಟು ಸಹಾಯಧನ ಶೇ.50 ರಷ್ಟು ಬ್ಯಾಂಕ್ ಸಾಲವಾಗಿ (ಘಟಕ ವೆಚ್ಚದಲ್ಲಿ ಸಹಾಯಧನ ಗರಿಷ್ಠ ಮಿತಿ ರೂ.2.00 ಲಕ್ಷಗಳು ಮತ್ತು ರೂ.3.50 ಲಕ್ಷಗಳು) ಒದಗಿಸುವ ಮೂಲಕ ಸೌಲಭ್ಯ ಕಲ್ಪಿಸಲಾಗುವುದು.

3. <u>**ಪ್ರೇರಣಾ ಯೋಜನೆ (ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆ:-**</u> ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಭೋವಿ ಜನಾಂಗದ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ಸ್ವಯಂ ಉದ್ಯೋಗ ಕೈಗೊಳ್ಳಲು ಉತ್ಪಾದನಾ/ ಸೇವಾ ಚಟುವಟಿಕೆಗಳಿಗೆ ಆರ್ಥಿಕ ನೆರವನ್ನು ಒದಗಿಸಲಾಗುತ್ತಿದೆ. ಮಹಿಳಾ ಪರಿಶಿಷ್ಟ ಜಾತಿಯ ಭೋವಿ ಜನಾಂಗದ ಮಹಿಳಾ ಸದಸ್ಯರಿಗೆ ರೂ.25,000/- ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ರೂ.15,000/- ಸಹಾಯಧನ ಹಾಗೂ ರೂ.10,000/- ಅಂಚಿನ ಹಣವಾಗಿರುತ್ತದೆ.

4. **ಗಂಗಾಕಲ್ಯಾಣ ಯೋಜನೆ:-**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಭೋವಿ ಜನಾಂಗದ ಸಣ್ಣ ಮತ್ತು ಅತಿ ಸಣ್ಣ ರೈತರ ಖುಷ್ಕಿ ಜಮೀನಿಗೆ ಕೆಳಕಂಡ ಕಾರ್ಯಕ್ರಮಗಳ ಮುಖೇನ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಅ) ವೈಯುಕ್ತಿಕ ನೀರಾವರಿ, ಕೊಳವೆಬಾವಿ ಯೋಜನೆ:-

ಈ ಕಾರ್ಯಕ್ರಮದಡಿ 1.20 ಎಕರೆಯಿಂದ 5 ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಭೋವಿ ಜನಾಂಗದ ರೈತರ ಖುಷ್ಕೀ ಜಮೀನಿನಲ್ಲಿ ಕೊಳವೆಬಾವಿ/ತೆರೆದ ಬಾವಿ ಕೊರೆದು, ಪಂಪ್‌ಸೆಟ್ & ಇತರೆ ಸಲಕರಣೆಗಳನ್ನು ಸರಬರಾಜು ಮಾಡಿ ಕೊಳವೆಬಾವಿಗೆ ವಿದ್ಯುದ್ಧೀಕರಣಗೊಳಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದು ಈ ಯೋಜನೆಯ ಅನುಷ್ಠಾನದ ಮುಖ್ಯ ಉದ್ದೇಶವಾಗಿರುತ್ತದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಕನಿಷ್ಠ ಮಿತಿ 1.00 ಎಕರೆ ಇರುತ್ತದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಗೂ ತುಮಕೂರು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಂತೆ ಘಟಕವೆಚ್ಚ ರೂ.4.50 ಲಕ್ಷವಿದ್ದು, ಇದರಲ್ಲಿ ರೂ.3.50ಲಕ್ಷ ಸಹಾಯಧನ ರೂ.0.50 ಲಕ್ಷ ವಿದ್ಯುದ್ಧೀಕರಣಕ್ಕೆ ಹಾಗೂ ರೂ.0.50 ಲಕ್ಷ ಅವಧಿ ಸಾಲವಾಗಿರುತ್ತದೆ. ಉಳಿದ

ಜಿಲ್ಲೆಗಳಿಗೆ ರೂ.3.50 ಲಕ್ಷ ಘಟಕ ವೆಚ್ಚ ನಿಗಧಿ ಪಡಿಸಲಾಗಿದ್ದು, ರೂ.2.50 ಲಕ್ಷ ಸಹಾಯಧನ ಹಾಗೂ ರೂ.0.50 ಲಕ್ಷ ವಿದ್ಯುದ್ಧೀಕರಣ ಹಾಗೂ ರೂ.0.50 ಲಕ್ಷ ಅವಧಿಸಾಲ ಇರುತ್ತದೆ.

**ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ತದನಂತರ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತದೆ.**

5) **ಭೂ ಒಡೆತನ ಯೋಜನೆ :-** ಭೂ ಒಡೆತನ ಯೋಜನೆಯಡಿ ಭೂ ರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಕನಿಷ್ಟ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ ಅಥವಾ ಕನಿಷ್ಟ 1/2 ಎಕರೆ (20 ಗುಂಟೆ) ಭಾಗಾಯ್ತು ಜಮೀನನ್ನು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿರದ ಇತರೆ ಜನಾಂಗದವರ ಜಮೀನನ್ನು ಖರೀದಿಸಿ ನೇರವಾಗಿ ಪರಿಶಿಷ್ಠ ಜಾತಿ ಭೋವಿ ಜನಾಂಗದ ಮಹಿಳೆಯರ ಹೆಸರಿನಲ್ಲಿ ನೋಂದಣಿ ಮಾಡಿಕೊಡಲಾಗುವುದು. ಜಮೀನಿನ ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಅಥವಾ ಜಿಲ್ಲೆ ಯೋಜನಾ ಅನುಷ್ಠಾನ ಸಮಿತಿಯ ದರ ನಿಷ್ಕರ್ಶೆಯಂತೆ ಘಟಕ ವೆಚ್ಚ ಗರಿಷ್ಠ ರೂ.15.00 ಲಕ್ಷಗಳ ವೆಚ್ಚದಲ್ಲಿ ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಘಟಕ ವೆಚ್ಚ ರೂ.20.00ಲಕ್ಷಗಳಲ್ಲಿ ಶೇ.50ರಷ್ಟು ಸಹಾಯಧನ ಹಾಗೂ ಶೇ.50 ರಷ್ಟು ಸಾಲವಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ. ಜಿಲ್ಲಾ ಕಛೇರಿಗಳಂದ ಪ್ರಸ್ತಾವನೆಯು ಬಂದ ನಂತರ ಕಾರ್ಯಕ್ರಮ ಅನುಷ್ಟಾನ ಮಾಡಲಾಗುವುದು. ಮೇಲಿನ ಯೋಜನೆಗಳನ್ನು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಸಹಾಯಧನ ಮತ್ತು ಬ್ಯಾಂಕಿನ ಸಹಯೋಗದೊಂದಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಸಹಾಯಧನವನ್ನು ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ ಈ ಕೆಳಕಂಡಂತೆ ಅನುದಾನವನ್ನು ನಿಗಧಿಪಡಿಸಿ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.**

**(ರೂ.ಕೋಟಿಗಳಲ್ಲಿ)**

| ಕ್ರ.ಸಂ | ವರ್ಷ | ನಿಗಮದಲ್ಲಿ ಲಭ್ಯವಿದ್ದ ಅನುದಾನ | ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಒಟ್ಟು ಲಭ್ಯವಿರುವ ಅನುದಾನ | ನಿಗಧಿ ಪಡಿಸಿದ ಗುರಿ | ನಿಗಧಿಪಡಿಸಿದ ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಉಳಿಕೆ ಅನುದಾನ |
|---|---|---|---|---|---|---|---|---|---|
| 1 | 2018-19 | 138.96 | 0 | 138.96 | 4599 | 127.445 | 2685 | 33.92 | 105.04 |
| 2 | 2019-20 | 105.04 | 27.00 | 132.04 | 4112 | 109.91 | 1768 | 44.26 | 87.78 |
| 3 | 2020-21 | 87.78 | 25.00 | 112.78 | 10871 | 106.285 | 8545 | 79.67 | 33.11 |
| 4 | 2021-22 | 33.11 | 40.00 | 73.11 | 6020 | 73.117 | 3425 | 40.25 | 32.867 |

**ಷರಾ:** 2018-19 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ರಾಯಚೂರು ಜಿಲ್ಲೆಗೆ ರೂ:28.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

## ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಯೋಜನಾವಾರು ವೆಚ್ಚದ ವಿವರ ಈ ಕೆಳಕಂಡಂತಿದೆ.

**2018-19:-**

1. ಉದ್ಯಮ ಶೀಲತಾ ಯೋಜನೆಯಡಿ ರೂ:12.92 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
2. ಐರಾವತ ಯೋಜನೆಗೆ ಸಂಬಂಧಿಸಿದಂತೆ ರೂ: 21.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**2019-20:-**

1. ಉದ್ಯಮ ಶೀಲತಾ ಯೋಜನೆಯಡಿ ರೂ:25.85 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
2. ಸಮೃದ್ಧಿ ಯೋಜನೆಯಡಿ ರೂ:6.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
3. ಭೂ ಒಡೆತನ ಯೋಜನೆಯಡಿ ರೂ:11.14 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
4. ಗಂಗಾ ಕಲ್ಯಾಣ ಯೋಜನೆಯಡಿ ರೂ:1.27 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**2020-21 :-**

1. ಸ್ವಯಂ ಉದ್ಯೋಗ ಯೋಜನೆಯಡಿ ಉದ್ಯಮ ಶೀಲತಾ, ನೇರಸಾಲ, ಮೈಕ್ರೋ ಕ್ರೆಡಿಟ್ ಯೋಜನೆಗೆ ರೂ:43.05 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
2. ಭೂ ಒಡೆತನ ಯೋಜನೆಯಡಿ ರೂ:23.34 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
3. ಗಂಗಾ ಕಲ್ಯಾಣ ಯೋಜನೆಯಡಿ ರೂ:13.29 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**ಷರಾ:** ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗದೇ ಇದ್ದರೂ, 2019-20 ಮತ್ತು 2020-21 ನೇ ಸಾಲಿಗೆ 286 ಫಲಾನುಭವಿಗಳಿಗೆ ರೂ: 34.48 ಕೋಟಿಗಳನ್ನು ನಿಗಮದಲ್ಲಿ ಲಭ್ಯವಿದ್ದ ಬಡ್ಡಿ ಹಣ, ಆಡಳಿತದ ವೆಚ್ಚದ ಹಣ, ಇತರೆ ಯೋಜನೆಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2019-20 ನೇ ಮತ್ತು 2020-21 ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಆದರೆ ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಸಹಾ, ಕಾನೂನು ಬಾಹಿರವಾಗಿ ವಿವಿಧ ಜಿಲ್ಲೆಗಳಿಗೆ ಕೊಳವೆ ಬಾವಿ ಕೊರೆಯಲು ಖಾಸಗಿ ಕಂಪನಿಗಳಿಗೆ ಕಾರ್ಯಾದೇಶ ನೀಡಿ ಅಕ್ರಮವಾಗಿ ರೂ:14.56 ಕೋಟಿಗಳನ್ನು ಪಾವತಿಸಲಾಗಿದೆ. ಅಲ್ಲದೇ 2018-19 ನೇ ಸಾಲಿನಲ್ಲಿ ಹೆಚ್ಚುವರಿ ಗುರಿ ಎಂದು ಟೆಂಡರ್ ಕರೆಯದೇ ಕಾನೂನು ಬಾಹಿರವಾಗಿ ಖಾಸಗಿ ಕಂಪನಿಗಳಿಗೆ ಸುಮಾರು 500 ಕೊಳವೆ ಬಾವಿ ಕೊರೆಯಲು ಖಾಸಗಿ ಕಂಪನಿಗಳಿಗೆ ಕಾರ್ಯಾದೇಶ ನೀಡಲಾಗಿದೆ.

**2021-22:**

1. ಸ್ವಯಂ ಉದ್ಯೋಗ ಯೋಜನೆಯಡಿ 2021-22 ನೇ ಸಾಲಿನ ಫೆಬ್ರವರಿ ಅಂತ್ಯಕ್ಕೆ ರೂ: 10.50 ಕೋಟಿಗಳನ್ನು ವೆಚ್ಚ ಮಾಡಿ 2000 ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
2. ಉದ್ಯಮ ಶೀಲತಾ ಯೋಜನೆಯಡಿ 2021-22 ನೇ ಸಾಲಿನ ಫೆಬ್ರವರಿ ಅಂತ್ಯಕ್ಕೆ ರೂ: 25.75 ಕೋಟಿಗಳನ್ನು ವೆಚ್ಚ ಮಾಡಿ 950 ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
3. ಮೈಕ್ರೋ ಕ್ರೆಡಿಟ್ ಯೋಜನೆಯಡಿ 2021-22 ನೇ ಸಾಲಿನ ಫೆಬ್ರವರಿ ಅಂತ್ಯಕ್ಕೆ ರೂ: 4.00 ಕೋಟಿಗಳನ್ನು ವೆಚ್ಚ ಮಾಡಿ 1600 ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

4. 2021-22 ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 300 ಗುರಿಗಳನ್ನು ನಿಗಧಿಪಡಿಸಿದ್ದು, ರೂ:11.10 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ, ತದನಂತರ ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

2021-2022 ನೇ ಸಾಲಿನ ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 20 ಗುರಿಗಳನ್ನು ನಿಗಧಿಪಡಿಸಿದ್ದು, ರೂ:8.76 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಜಿಲ್ಲಾ ಕಛೇರಿಗಳಿಂದ ಪ್ರಸ್ತಾವನೆಯು ಬಂದ ನಂತರ ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಸಕಇ 214 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು